ಅಮರ ಚಿತ್ರ ಕಥೆ

213 ರೂ 2.50

# ವೇಲು ತಂಬಿ

ಕನ್ನಡ ರೂಪಾಂತರ : ಡಾ॥ ಕೆ. ಶಿವರಾಮ ಕಾರಂತ



KAR
ಗ್ರಂಥ ಸ್ವಾಮ್ಯ ವಿಭಾಗ

ಕೇರಳದ ವೀರ ಪುತ್ರ

ನಮ್ಮ ದೇಶದ ನೈಋತ್ಯ ಭಾಗದಲ್ಲಿ ಕೇರಳ ಪ್ರಾಂತ್ಯವಿದೆ. ಭಾರತಕ್ಕೆ ಸ್ವಾತಂತ್ರ್ಯ ಬರುವ ಮುಂಚೆ ಈಗಿನ ಕೇರಳ ತಿರುವಾಂಕೂರು ಮತ್ತು ಕೊಚ್ಚಿ ಹಾಗೂ ಮಲಬಾರು ಪ್ರಾಂತ್ಯಗಳಾಗಿ ಹರಡಿತ್ತು. ಮಲಬಾರು ಬ್ರಿಟಿಷರ ನೇರ ಆಳ್ವಿಕೆಯಲ್ಲಿತ್ತು. ತಿರುವಾಂಕೂರು ಮತ್ತು ಕೊಚ್ಚಿ ಆಶ್ರಿತ ದೊರೆಗಳ ಕೈಯಲ್ಲಿತ್ತು. ಹದಿನೆಂಟನೆಯ ಶತಮಾನದೊಳಗಾಗಿ ಬ್ರಿಟಿಷರು ತಿರುವಾಂಕೂರಿನಲ್ಲಿ ಕಾಲೂರಿ ಬಲಿಷ್ಠರಾಗಿದ್ದರು. ತಿರುವಾಂಕೂರಿನ ಮಹಾರಾಜ ಬ್ರಿಟಿಷರಿಗೆ ಸೇರಿದ ಈಸ್ಟ್ ಇಂಡಿಯಾ ಕಂಪೆನಿಗೆ ಆರು ಲಕ್ಷ ರೂಪಾಯಿಗಳ ಕಪ್ಪ ಕೊಡಲು ಒಪ್ಪಿದ. ಬ್ರಿಟಿಷರು ಅವನಿಗೆ ತಮ್ಮ ರಕ್ಷಣೆ ಕೊಡಲು ಒಪ್ಪಿದ್ದರು.

1798 ರಲ್ಲಿ ತಿರುವಾಂಕೂರಿನಲ್ಲಿ ಕೇವಲ ಹದಿನಾರು ವರ್ಷ ಪ್ರಾಯದ ಬಲರಾಮ ವರ್ಮ ಪಟ್ಟಕ್ಕೆ ಬಂದ. ಆತನಿಗೆ ಜಯಂತ ಶಂಕರ ನಂಬೂದಿರಿ ಎಂಬ ದಿವಾನನಿದ್ದ. ಆತನು ದೊರೆಯನ್ನು ಕಡೆಗಣಿಸಿ ತನ್ನಿಷ್ಟ ಬಂದಂತೆ ಜನರ ಮೇಲೆ ತೆರಿಗೆ ಹೇರಿದ. ತಾನು ಶ್ರೀಮಂತನಾಗತೊಡಗಿದ. ಬ್ರಿಟಿಷ್ ರೆಸಿಡೆಂಟರ ಬೆಂಬಲ ಅವನಿಗಿತ್ತು. ಅವನ ದಬ್ಬಾಳಿಕೆಯಿಂದ ಕಂಗಾಲಾದ ಪ್ರಜೆಗಳು ವೇಲು ತಂಬಿ ಎಂಬ ಯುವ ನಾಯಕನ ನೇತೃತ್ವದಲ್ಲಿ ಆ ದಿವಾನನನ್ನು ಪದಚ್ಯುತಿಗೊಳಿಸಿದರು.

ಮುಂದೆ ವೇಲು ತಂಬಿಯೇ ತಿರುವಾಂಕೂರಿನ ದಿವಾನನಾದ. ಆತ ತನ್ನ ಆಡಳಿತದಲ್ಲಿ ಜನರ ಮೇಲಿನ ಕರಭಾರವನ್ನು ಇಳಿಸಿದನಲ್ಲದೆ ಅನೇಕ ಸುಧಾರಣೆಗಳನ್ನು ತಂದ. ಆಗ ಈಸ್ಟ್ ಇಂಡಿಯಾ ಕಂಪೆನಿಯವರು ತಿರುವಾಂಕೂರಿನ ಆಡಳಿತದಲ್ಲಿ ಕೈಹಾಕತೊಡಗಿದರು. ಇದನ್ನು ದಿವಾನ ವೇಲು ತಂಬಿ ಪ್ರತಿಭಟಿಸಿದ. ಆತನು ಕೊಚ್ಚಿ ಪ್ರಾಂತ್ಯದ ಮಂತ್ರಿಯಾದ ಪಾಲಿಯತ್ತು ಅಚ್ಚನ್ ಎಂಬವನೊಡನೆ ಕೂಡಿ ಸೇನಾಸಹಿತರಾಗಿ ಬ್ರಿಟಿಷರ ವಿರುದ್ಧ ಕಾದಾಡಬೇಕಾಯಿತು. ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧವಾಗಿ ಪ್ರಜೆಗಳ ಸ್ವಾತಂತ್ರ್ಯ ಯುದ್ಧ ಹೂಡುವುದಕ್ಕೆ ಆತ ಪ್ರೇರಣೆ ಕೊಟ್ಟ. ಈ ಯುದ್ಧದಲ್ಲಿ ವೇಲು ತಂಬಿಯ ಪ್ರತಿಭಟನೆ ಸೋಲಾಯಿತು.

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

May 1980

Published by P N Kamat for IBH Prakashana Gandhinagar Bangalore 560 009 and printed by A C Chobe at IBH Printers, Marol Naka Mathuradas Vissanji Road, Andheri (East), Bombay 400 059

Editor: Anant Pai   Script . Radha M. Nair   Artworks M Mohandas

COPY RIGHT BUREAU


# ವೇಲು ತಂಬಿ




ತಿರುವಾಂಕೂರು* ರಾಜ್ಯದಲ್ಲಿ ಮಹಾರಾಜ ಬಲರಾಮ ವರ್ಮನ ಆಳ್ವಿಕೆಯಲ್ಲಿ
ವೇಲು ತಂಬಿ ಒಬ್ಬ ತಹಸೀಲ್ದಾರನಾಗಿದ್ದ.


* ಕೇರಳದ ಒಂದು ಭಾಗ



ಆ ಕಾಲದಲ್ಲಿ ತಿರುವಾಂಕೂರಿನ ಪ್ರಜೆಗಳು ಅನ್ಯಾಯದ ತೆರಿಗೆಯ ಹೊರೆಯಿಂದ ಕಂಗಾಲಾಗಿದ್ದರು
ಸ್ವಾಮಿ. ಕಂದಾಯದ ಹಣಕ್ಕೆ ಬದಲು ನನ್ನ ಬೆಳೆಯನ್ನೆಲ್ಲ ಒಯ್ಯಬೇಡಿ'
ನಾವೇನು ಮಾಡೋಣ ? ದಿವಾನರ ಅಪ್ಪಣೆ ಹಾಗಿದೆ
ಮಹಾರಾಜ ಕೇವಲ ಹದಿನಾರು ವರ್ಷದ ಬಾಲಕ-ನಾದುದರಿಂದ ದಿವಾನನಿಗೆ ಅಂಕೆ, ಆತಂಕವಿರಲಿಲ್ಲ ಆತ ಪ್ರಜೆಗಳ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದ
ದಿವಾನರ ಇಚ್ಛೆಗೆ ಎದುರಾಡುತ್ತೀಯಾ ? ತಕೋ'
ಆ ದಿವಾನ ಅರಸನ ಹಕ್ಕುಗಳನ್ನು ಒಂದೊಂದಾಗಿ ಕಸಿಯ-ತೊಡಗಿದ
ನಾನು ಹೊರಗೆ ಹೋಗಬೇಕು ಕೂಡಲೆ ಮಹಾರಾಜನ ಪಲ್ಲಕ್ಕಿಯನ್ನು ತರಿಸು'
ಅಪ್ಪಣೆ ಮಹಾಸ್ವಾಮಿ.



ಮಹಾರಾಜರ ಪಲ್ಲಕ್ಕಿಯಲ್ಲಿ ದಿವಾನ ಹೋಗುತ್ತಿರುವುದನ್ನು ನೋಡಿದ ವೇಲು ತಂಬಿ ತನ್ನ ತಮ್ಮ ಪದ್ಮನಾಭನನ್ನು ಕೇಳಿದ
ಅದು ದೊರೆಗಳ ಪಲ್ಲಕ್ಕಿಯಲ್ಲವೇ ? ಒಳಗೆ ಕುಳಿತಿರುವವರು ಯಾರು ?
ದಿವಾನ ಜಯಂತ ಶಂಕರ ನಂಬೂದಿರಿಗಳು
ದಿವಾನನ ಉದ್ಧಟತನದಿಂದ ವೇಲು-ತಂಬಿಗೆ ಸಿಟ್ಟು ಬಂತು
ಏ, ಪಲ್ಲಕ್ಕಿಯನ್ನು ನಿಲ್ಲಿಸು !
ಅಣ್ಣಾ, ದಿವಾನನೊಡನೆ ಸ್ವಲ್ಪ ಎಚ್ಚರದಿಂದ ಮಾತಾಡು!
ದಿವಾನನಿಗೆ ಆ ಪಲ್ಲಕ್ಕಿಯಲ್ಲಿ ಕುಳಿತುಕೊಳ್ಳುವ ಅಧಿಕಾರವಿಲ್ಲ!
ಇದರ ಫಲವನ್ನು ನೀನು ಅನುಭವಿಸಬೇಕಾದೀತು ವೇಲು ತಂಬಿ!
ಫಲವನ್ನು ಅನುಭವಿಸಬೇಕಾದವರು ನೀವು! ನಿಮ್ಮ ದುರಾಸೆಗೆ, ಬ್ರಷ್ಟಾಚಾರಕ್ಕಾಗಿ!



ದಿವಾನ ಸಿಡಿಮಿಡಿಗೊಂಡು ರಾಜಧಾನಿಯಾದ ತಿರುವನಂತಪುರಕ್ಕೆ ಮರಳಿ ತನ್ನ ಮಿತ್ರನೂ ಜಮೀನ್ದಾರನೂ ಆದ ತಾರಕನ್‌ನನ್ನು ಸಂಧಿಸಿದ
ವೇಲು ತಂಬಿಯೆಂಬ ತರುಣ ನನ್ನನ್ನು ಅವಮಾನಿಸಿದ ಅರೆ, ತಾರಕನ್, ಏಕೆ ಮಂಕಾಗಿದ್ದೀಯೆ ? ಏನು ವಿಷಯ ?
ಒಂದು ದೊಡ್ಡ ಪೇಚಿಗೆ ಸಿಕ್ಕಿದ್ದೇನೆ ಹಣದ ಅಗತ್ಯ ಹೆಚ್ಚಾಗಿದೆ ಎಲ್ಲಿಂದ ತರಬೇಕೋ ತಿಳಿಯದು
ಹ್ಹ ಹ್ಹ ಅದಕ್ಕೇಕೆ ಚಿಂತೆ ? ಕಂದಾಯ ಸ್ವಲ್ಪ ಹೆಚ್ಚಿಸಿದರೆ ಆಯಿತು
ಒಳ್ಳೆಯ ಯೋಚನೆ ! ನಮ್ಮ ಸುಖಕ್ಕಾಗಿ ಪ್ರಜೆಗಳು ದಂಡ ತೆರಲಿ
ಬ್ರಿಟಿಷರ ಬೆಂಬಲ ನಮಗಿದೆ ಮೆಕಾಲ್ ರೆಸಿಡೆಂಟನಾಗಿರು-ವಷ್ಟು ಕಾಲ ಮಹಾರಾಜನೂ ನಮಗೆ ಬಗ್ಗಬೇಕು ನಮಗೆ ಯಾರ ಭಯವೂ ಇಲ್ಲ
ಹಾಗಿದ್ದರೆ ಮಹಾರಾಜರಿಗೆ ವಿಷಯ ತಿಳಿಸುತ್ತೇನೆ



ದಿವಾನ ಮಹಾರಾಜನಿಗೆ ತನ್ನ ಯೋಜನೆ ತಿಳಿಸಿದ
ನೀನು ಸೂಚಿಸುವ ಈ ತೆರಿಗೆಗಳು ವಿಪರೀತ ಹೆಚ್ಚೆಂದು ತೋರುತ್ತದೆ
ಮಹಾಸ್ವಾಮಿ. ರಾಜ್ಯದ ಹಿತ ಸಾದನೆಗೆ ಅಷ್ಟು ಬೇಕೇ ಬೇಕು


ಹೊಸ ತೆರಿಗೆಯಿಂದಾಗಿ ಜನ ರೊಚ್ಚಿಗೆದ್ದರು
ಇದಕ್ಕೆ ಅರ್ಥವೇ ಇಲ್ಲ!
ದಿವಾನರಿಗೆ ನ್ಯಾಯ, ನೀತಿ ಇಲ್ಲ!
ಇದನ್ನು ನಾವು ಎಲ್ಲಿಂದ ತರುವುದು ?



ಅವರೆಲ್ಲ ವೇಲು ತಂಬಿಯ ಬಳಿಗೆ ಹೋದರು ಮೊದಲಿನಿಂದಲೂ ಆತ ಅವರ ಕಷ್ಟಗಳಲ್ಲಿ ನೆರವಾಗುತ್ತಿದ್ದ.
ವೇಲು ತಂಬಿ, ನೀನು ನಮ್ಮನ್ನು ಉಳಿಸಬೇಕು!
ನಾವು ಬರಿದೆ ಗೊಣಗಿದರೆ ಏನೂ ಪ್ರಯೋಜನವಿಲ್ಲ. ನಮ್ಮ ದೂರನ್ನು ಮಹಾರಾಜರ ಬಳಿಗೆ ಒಯ್ಯೋಣ


ಆ ದಿವಾನನನ್ನು ತೆಗೆಯಲೇ - ಬೇಕೆಂದು ಕೇಳುವ
ಮಹಾರಾಜ - ರಿಗೆ ದೂರನ್ನು ಮುಟ್ಟಿಸುವ



ಅವರೆಲ್ಲ ವೇಲುತಂಬಿಯೊಡನೆ ರಾಜಧಾನಿಗೆ ಹೋದರು


ಮಹಾರಾಜನ ಮುಂದೆ ಪ್ರಜೆಗಳು ತಮ್ಮ ಸಂಕಷ್ಟವನ್ನು ತೋಡಿಕೊಂಡರು
ಮಹಾಸ್ವಾಮಿ, ನಾವು ನಿಮ್ಮ ದಿವಾನರ ಹಿಂಸೆಯಿಂದ ನುಜ್ಜುಗುಜ್ಜಾಗಿದ್ದೇವೆ ಅವರನ್ನು ನೀವು ತೆಗೆಯಲೇಬೇಕು


ನೀವೆನ್ನುವುದು
ಸರಿ ರಾಜ್ಯದಲ್ಲಿ
ಇಷ್ಟೆಲ್ಲ ಭ್ರಷ್ಟಾಚಾರ
ತುಂಬಿದ್ದುದು ನನಗೆ
ತಿಳಿದೇ ಇರಲಿಲ್ಲ
ದಿವಾನನನ್ನು ಅಧಿಕಾರದಿಂದ
ತೆಗೆಯಲು ಈ ಮೂಲಕ ಆಜ್ಞೆ
ಮಾಡಿದ್ದೇನೆ ಅವನ ಕಿವಿಗಳನ್ನು
ಕತ್ತರಿಸಿ ಅವನನ್ನು ರಾಜ್ಯದ
ಗಡಿಯಿಂದ ಹೊರಕ್ಕೆ ಅಟ್ಟ-
ಬೇಕೆಂಬುದು ನನ್ನಾಜ್ಞೆ'
ವೇಲು ತಂಬಿ,
ನೀನು ನನ್ನ
ಹೊಸ ದಿವಾನ-
ನಾಗಬೇಕು
ಮಹಾರಾಜರ
ಅನುಗ್ರಹ
ಮಹಾಪ್ರಭುಗಳ ಮತ್ತು
ನಾಡಿನ ಸೇವೆಯನ್ನು
ನನ್ನ ಶಕ್ತಿ ಮೀರಿ
ಮಾಡುತ್ತೇನೆ
ಹೊಸ
ದಿವಾನರು
ಚಿರಾಯು-
ವಾಗಲಿ'



ಹಳೆಯ ದಿವಾನನನ್ನು ಬಂಧಿಸಿದರು
ಇದೇನು ?!
ಮಹಾರಾಜರ ಆಜ್ಞೆ.



ಅವನಿಗೆ ಹಾಗೆಯೇ ಆಗಬೇಕು'


ತಾರಕನ್ ಸಹಾಯಕ್ಕಾಗಿ ಬ್ರಿಟಿಷ್ ರೆಸಿಡೆಂಟನ ಬಳಿಗೆ ಧಾವಿಸಿದ.
ಕರ್ನಲ್ ಮೆಕಾಲೆ ಸಾಹೇಬರೇ, ನೀವೇ ನನ್ನನ್ನು ಕಾಪಾಡ-ಬೇಕು'
ಸ್ವಲ್ಪ ಸಮಾಧಾನ ತಾಳು ಏನಾದರೂ ಉಪಾಯವಿದ್ದರೆ ತಿಳಿಸು



ಮಹಾರಾಜರೊಡನೆ ಆದ ಒಪ್ಪಂದದ ಅವಧಿ ಇನ್ನೇನು ಮುಗಿಯು- ತ್ತದೆಯಲ್ಲ !
ಹೌದು, ಆತ ನಮ್ಮ ರಕ್ಷಣೆಗೆ ಪ್ರತಿಯಾಗಿ ಆರು ಲಕ್ಷ ರೂಪಾಯಿ ಕೊಡಬೇಕು



ಆ ಆರನ್ನು ಎಂಟಕ್ಕೆ ಹೆಚ್ಚಿಸಿ ಅವರ ಕತೆ ಮುಗಿಯುತ್ತದೆ !
ಇದಾದರೆ ಜಾಣತನ ! ಆತನಿಗೆ ಅಷ್ಟನ್ನು ತೆರಲು ಅಸಾಧ್ಯವಾದೀತು


ನಾನು ಈ ಮೊದಲೇ ಖಜಾನೆಯನ್ನು ಬರಿದು ಮಾಡಿದ್ದೇನೆ ನನ್ನ ತಂಟೆಗೆ ಬರುವ ಮೊದಲು ಆ ಮಹಾರಾಜನೂ ಅವನ ಹೊಸ ದಿವಾನನೂ ಹತ್ತು ಸಾರಿ ಯೋಚಿಸಲಿ !



ಅರಮನೆಯಲ್ಲಿ-
ಬ್ರಿಟಿಷರು ನಮ್ಮಿಂದ ಈಗ ಎಂಟು ಲಕ್ಷ ರೂಪಾಯಿಗಳ ಕಪ್ಪ ಕೇಳುತ್ತಿದ್ದಾರೆ ಅದನ್ನು ತೆರುವುದು ಅಸಾಧ್ಯ'
ಪ್ರಭುಗಳೇ, ನಾವು ಕಪ್ಪ ಕೊಡಲು ನಿರಾಕರಿಸಿದರೆ ಬ್ರಿಟಿಷರೊಡನೆ ವೈರ ಕಟ್ಟಿಕೊಳ್ಳಬೇಕಾದೀತು


ಈ ಸಮಯದಲ್ಲಿ, ಹಗೆತನ ಒಳ್ಳೆಯದಲ್ಲ ಒಪ್ಪಂದಕ್ಕೆ ಸಹಿ ಹಾಕಿ, ಆಮೇಲೆ ಕಾಲ ತಳ್ಳಬಹುದು
ಆಗಲಿ ತಂಬಿ


ಎಂಟು ಲಕ್ಷ ರೂಪಾಯಿಗಳನ್ನು ಒದಗಿಸುವ ಹೊಣೆ ತಂಬಿಯ ಪಾಲಿಗೆ ಬಂತು.
ಪದ್ಮನಾಭನ್, ಏನಾದರೂ ಮಾಡಿ ಎಂಟು ಲಕ್ಷ ರೂಪಾಯಿ ಕೂಡಿಸಲೇ-ಬೇಕು
ಅಣ್ಣಾ, ಯಾವುದು ಸರಿಯೋ ಅದನ್ನು ಮಾಡು.



ದವಸ ಧಾನ್ಯ ಬಚ್ಚಿಟ್ಟಿದ್ದವರ ಬಗ್ಗೆ ಆತ ಕಠಿಣ ಧೋರಣೆ ವಹಿಸಿದ.
ವೇಲು ತಂಬಿಯ ಧೋರಣೆ ಬಲು ಬಿಗಿ, ಆದರೆ ನ್ಯಾಯ-ವಾದದ್ದು.
ಇನ್ನು ಮುಂದೆ ದವಸ-ಧಾನ್ಯ ಬಚ್ಚಿಡುವವರು ಎರಡೆರಡು ಬಾರಿ ಯೋಚಿಸಲಿ



ಆತ ಸೈನ್ಯದ ಶಿಸ್ತನ್ನೂ ಬಿಗಿಗೊಳಿಸಿದ.


ಜಮೀನಿನ ಉತ್ಪನ್ನದ ಮೇಲೆ ಭೂಕಂದಾಯವನ್ನು ನಿರ್ಣಯಿಸಿದ
ನಿಮ್ಮ ಜಮೀನಿನ ಉತ್ಪನ್ನವನ್ನು ನಿರ್ಣಯಿಸಲು ಭೂಮಿಯನ್ನು ಅಳೆಯುತ್ತೇವೆ
ಆಗಲಿ, ವೇಲು ತಂಬಿ-ಯವರಿಂದ ನಮಗೆ ಅನ್ಯಾಯವಾಗದು



ಒಂದು ದಿನ ವೇಲು ತಂಬಿ ತನ್ನ ಕುಟುಂಬದ ಮನೆಗೆ ವಿಶ್ರಾಂತಿಗೆ ಹೋಗಿದ್ದ
ನಮ್ಮ ಅದೃಷ್ಟಕ್ಕೆ ಈ ವರ್ಷ ಭತ್ತದ ಬೆಳೆ ಚೆನ್ನಾಗಿದೆ !
ಮಗನೇ ತೆಂಗಿನ ಫಸಲು ಸಹ ಚೆನ್ನಾಗಿದೆ
ಅಮ್ಮ, ದಾಖಲೆಯಲ್ಲಿ ನಮ್ಮ ಜಮೀನನ್ನು ಯಾವ ದರ್ಜೆಗೆ ಸೇರಿಸಿದ್ದಾರೆ ?
ಉತ್ಪನ್ನ ನೋಡಿದರೆ ಮೊದಲ ದರ್ಜೆಗೆ ಸೇರಿಸಬೇಕಾಗಿತ್ತು..
. ಆದರೆ ಅದನ್ನು ರಿಯಾಯಿತಿ-ಯಿಂದ ಮೂರನೆ ದರ್ಜೆಗೆ ಸೇರಿಸಿದರು ಅದರಿಂದ ಕಂದಾಯದಲ್ಲಿ ಸ್ವಲ್ಪ ಉಳಿತಾಯ-ವಾಯಿತು
ಅಮ್ಮಾ, ನ್ಯಾಯವಾಗಿ ಕೊಡ-ಬೇಕಾದದ್ದನ್ನು ಕೊಟ್ಟು ನೀನು ಒಳ್ಳೆಯ ಮೇಲ್ಪಂಕ್ತಿ ಹಾಕಬಾರದಿತ್ತೆ ?



ನೀನು ಮಾಡಿದ್ದು ತಪ್ಪಲ್ಲವೇ ?
ರಿಯಾಯಿತಿ ತೋರಿಸಿದ ಅಧಿಕಾರಿಯದೂ ಅಪರಾಧ ಅವನನ್ನು ದಂಡಿಸಬೇಕಾದೀತು
ತಿರುವನಂತಪುರಕ್ಕೆ ಹೋದೊಡನೆ ವೇಲು ತಂಬಿ ಎಲ್ಲ ಅಧಿಕಾರಿಗಳನ್ನು ಬರಮಾಡಿಕೊಂಡ
ಇನ್ನು ಮುಂದೆ ಯಾವ ತೆರನ ಭ್ರಷ್ಟಾಚಾರವನ್ನೂ ಮನ್ನಿಸುವಂತಿಲ್ಲ ಯಾರೂ ಕಾನೂನನ್ನು ಮೀರುವಂತಿಲ್ಲ ನಾನಾದರೂ ಸರಿ. ಬೇರಿನ್ನಾರಾದರೂ ಸರಿ ಕಾನೂನು ಕಾನೂನೇ
ತಾರಕನ್‌ಗೆ ಕೆಟ್ಟ ಸುದ್ದಿಯೊಂದು ಕಾದಿತ್ತು.
ಧಣಿಯೇ, ಕಂದಾಯ ಕೊಡಲಿಲ್ಲವೆಂದು ಹೊಸ ದಿವಾನರು ನಿಮ್ಮ ಜಮೀನುಗಳನ್ನು ವಶಪಡಿಸಿಕೊಂಡಿದ್ದಾರೆ'
ಹಾಗೋ ! ಹಾಗಿದ್ದರೆ ಈ ಕ್ಷಣ ರೆಸಿಡೆಂಟ್ ಸಾಹೇಬರನ್ನು ನೋಡುತ್ತೇನೆ !



ನಾನು ಇನ್ನೊಮ್ಮೆ
ನಿಮ್ಮ ಸಹಾಯ ಬೇಡಿ
ಬಂದಿದ್ದೇನೆ ನನ್ನ ಜಮೀನು-
ಗಳನ್ನು ಸ್ವಾಧೀನ ಪಡಿಸಿ-
ಕೊಂಡಿದ್ದಾರೆ' ನಾನು
ತೀರ ಕೆಟ್ಟೆ!
ನಿನಗೆ ರಿಯಾಯಿತಿ ತೋರಿಸು-
ವಂತೆ ಒಬ್ಬ ಮಾತನ ಕೈಲಿ
ವೇಲು ತಂಬಿಗೆ ಹೇಳಿ
ಕಳುಹಿಸುತ್ತೇನೆ
ರೆಸಿಡೆಂಟನ ಸಲಹೆಯನ್ನು
ವೇಲು ತಂಬಿ ನಿರಾಕರಿಸಿದ
ಈ ತಾರಕನ್ ಎಷ್ಟೋ
ಕಾಲ ಜನರನ್ನು ಹಿಂಡಿ
ಬದುಕಿದವ ಈಗ ಅದಕ್ಕೆ
ತಕ್ಕ ಶಾಸ್ತಿಯಾಯಿತು
ವೇಲು ತಂಬಿ ನನ್ನ ಮಾತನ್ನು
ನಿರಾಕರಿಸಿದನೇ' ಅವನನ್ನು
ಬಲಿ ಹಾಕುತ್ತೇನೆ ಮಹಾರಾಜ-
ನಿಗೆ ಹೇಳಿ ಅವನ ದಿವಾನ-
ಗಿರಿ ತಪ್ಪಿಸುತ್ತೇನೆ'



ಮಹಾರಾಜನಿಗೆ ರೆಸಿಡೆಂಟನ ಸಂದೇಶ ತಲುಪುತ್ತಲೇ -
ರೆಸಿಡೆಂಟನಿಗೆ ನನ್ನನ್ನು ಆಜ್ಞಾಪಿಸುವ ಹಕ್ಕಿಲ್ಲ ಎಂದು ತಿಳಿಸು ಹೋಗು! ನನ್ನ ದಿವಾನನನ್ನು ನಾನು ವಜಾ ಮಾಡ- ಲಾರೆ.
ಈ ಸುದ್ದಿ ತಿಳಿದಾಗ ವೇಲು ತಂಬಿ ಸಿಡಿಮಿಡಿಗೊಂಡ
ಮಹಾಸ್ವಾಮಿ, ಬ್ರಿಟಿಷರಿಗೆ ನಮ್ಮ ಖಾಸಗಿ ವ್ಯವಹಾರಗಳಲ್ಲಿ ಕೈ ಹಾಕುವ ಹಕ್ಕಿಲ್ಲ' ಒಪ್ಪಂದದಿಂದ ಅಂಥ ಹಕ್ಕು ಬರುವುದಿಲ್ಲ.
ಈ ಬ್ರಿಟಿಷರು ಬಂದದ್ದು ವ್ಯಾಪಾರ ಮಾಡಲಿಕ್ಕೆ ಅಷ್ಟನ್ನು ಮಾಡಿಕೊಂಡು ಸುಮ್ಮನಿರಬಾರದೇ ?
ಮಹಾರಾಜನ ಧೋರಣೆಯನ್ನು ಕಂಡ ಮೆಕಾಲೆ ಸಿಡಿಮಿಡಿಗೊಂಡ.
ನಿಮ್ಮ ಪ್ರಭುಗಳು ನಾನು ಹೇಳಿದಂತೆ ಕೇಳಲಾರರೋ ? ಅವರಿಂದ ನಮಗೆ ಬರ- ಬೇಕಾಗಿರುವ ಎಂಟು ಲಕ್ಷ ರೂಪಾಯಿ ಕಪ್ಪವನ್ನು ಈ ಕೂಡಲೇ ನಮಗೆ ಮುಟ್ಟಿಸಬೇಕೆಂದು ಹೇಳು!



ಮಹಾಸ್ವಾಮಿ, ಇದೇ ರೀತಿ ರೆಸಿಡೆಂಟ್ ದಬ್ಬಾಳಿಕೆ ನಡೆಸಲು ಬಿಡಕೂಡದು ಇದನ್ನು ತಡೆಯಲೇಬೇಕು'


ವೇಲು ತಂಬಿ, ಇದರ ಜವಾಬ್ದಾರಿ-ಯನ್ನೆಲ್ಲ ನಿನಗೆ ವಹಿಸಿದ್ದೇನೆ


ಪದ್ಮನಾಭನ್, ಇನ್ನು ಯುದ್ಧ ಅನಿವಾರ್ಯ ಅನಿಸುತ್ತದೆ ನಮ್ಮ ಸೇನಾನಿಗಳಿಗೆ ಸಜ್ಜಾಗಿರಲು ತಿಳಿಸು
ಬಲಿಷ್ಠ ಬ್ರಿಟಿಷರ ಜೊತೆಗೆ ನಾವು ಕಾದುವುದು ಅಷ್ಟು ಸುಲಭದ ಕೆಲಸವೇ ?


ದೂರದ ಕೋಟೆಗಳನ್ನು ಬಲಗೊಳಿಸಿದರು..



ಆಯಕಟ್ಟಿನ ಸ್ಥಳಗಳಿಗೆ ಸೈನ್ಯ ಕಳುಹಿಸಿದರು



ಸೈನ್ಯ ಕಾದಲು ಸಿದ್ಧವಾಗಿ ನಿಂತಿತು.
ಬ್ರಿಟಿಷರ ಇದಿರಿಗೆ ಕಾದಲು ಕೊಚ್ಚಿಯ ಮಹಾರಾಜರು ನಮಗೆ ಸಹಾಯ ಮಾಡುತ್ತಾರಂತೆ
ಬ್ರಿಟಿಷರನ್ನು ಸೋಲಿಸಲು ನಾವೆಲ್ಲ ಒಟ್ಟಾಗಬೇಕು.


ವೇಲು ತಂಬಿಯ ಸೈನ್ಯಕ್ಕೂ ಬ್ರಿಟಿಷರ ಸೈನ್ಯಕ್ಕೂ ಘರ್ಷಣೆಯಾಯಿತು.
ಬ್ರಿಟಿಷರು ದೀರ್ಘಕಾಲದಿಂದ ನಮ್ಮನ್ನು ಪೀಡಿಸಿದರು ಇನ್ನು ಅವರಿಂದ ಪಾರಾಗುವ
1808 ನೇ ಇಸವಿ ಡಿಸೆಂಬರ್ 18 .
ಮುಂದೆ ನುಗ್ಗಿ! ರೆಸಿಡೆಂಟನ ಅರಮನೆಯ ಬಾಗಿಲಿಗೇ ಬಂದಿದ್ದೇವೆ
ಅರಮನೆ ನಮ್ಮ ವಶಕ್ಕೆ ಬಂತು !
ಬ್ರಿಟಿಷರಿಗೆ ಧಿಕ್ಕಾರ !


ಮಕಾಲೆ ಹೇಗೋ ತಪ್ಪಿಸಿಕೊಂಡ.
ಅವನು ತಪ್ಪಿಸಿಕೊಂಡ ಆದರೂ ಅಂಜಬೇಕಿಲ್ಲ ಅವನು ಸಿಕ್ಕಿಯೇ ಸಿಕ್ಕಿಯಾನು !
ಆದರೆ ವೇಲು ತಂಬಿಯ ಈ ವಿಜಯ ಅಲ್ಪ ಕಾಲದ್ದಾಯಿತು
ಬ್ರಿಟಿಷರ ಸಹಾಯಕ್ಕೆ ಮದರಾಸಿನಿಂದ ಹೊಸ ಸೈನ್ಯ ಬರುತ್ತಿದೆಯಂತೆ ! ಏನು ಮಾಡುವುದು ?
ಅಣ್ಣಾ, ಹೆದರಬೇಡ ಕೊಚ್ಚಿಯಿಂದ ನಮಗೆ ಸಹಾಯ ಬರುತ್ತದೆ.
ದಿನ ಕಳೆದಂತೆ ಯುದ್ಧದಲ್ಲಿ ಸೋಲೇ ಕಾಣಿಸಿದರೂ...
ನಮಗೆ ಬರಬೇಕಾದ ಸಹಾಯ ಇನ್ನೂ ಬಂದಿಲ್ಲ
ದೇವರೇ, ಮೊದಲು ಜಯ ಗಳಿಸಿದ ನಾವು ಈಗ ಸೋಲುವ ಗತಿ ಬಂತೇ ?


ಬ್ರಿಟಿಷರ ಬಲಿಷ್ಠ ನೌಕಾಪಡೆ ಮಹಾರಾಜನ ಹಡಗು-
ಗಳನ್ನು ಪುಡಿಗೈದುವು.


ಆದರೂ ವೇಲು ತಂಬಿ ಎದೆಗುಂದಲಿಲ್ಲ
ಮಿತ್ರರೇ, ಕಟ್ಟಕಡೆಯ ಪ್ರಯತ್ನದಿಂದ ಹೇಗಾದರೂ ಮಾಡಿ ಬ್ರಿಟಿಷರ ನೊಗವನ್ನು ಕಳಚಿಕೊಳ್ಳೋಣ


ಅವನ ಸ್ವಾತಂತ್ರ್ಯದ ಕರೆಗೆ ಜನರು ಪ್ರತಿಸ್ಪಂದಿಸಿದರು
ಸ್ವಾತಂತ್ರ್ಯ!
ವೇಲು ತಂಬಿ ನಮಗೆ ಸ್ವಾತಂತ್ರ್ಯ ತಂದು-ಕೊಡುತ್ತಾನೆ!
ಬ್ರಿಟಿಷರಿಗೆ ತಲೆಬಾಗುವ ಬದಲು ಸಾವನ್ನು ಅಪ್ಪಿಯೇವು!


ಆದರೆ ಒಂದೊಂದೇ ನಗರ ಬ್ರಿಟಿಷರ ವಶವಾಗ-
ತೊಡಗಿತು
ಕೊನೆಗೆ ಬ್ರಿಟಿಷರು ತಿರುವನಂತಪುರದ
ಬಳಿಗೆ ಬಂದರು
ಬ್ರಿಟಿಷರು ಬಂದೇಬಿಟ್ಟರು !
ಎಲ್ಲವೂ ಹೋದಂತೆ !
ಇನ್ನೇನು' ಯಾವ ಗಳಿಗೆಯಲ್ಲಾದರೂ ತಿರುವನಂತಪ್ರರ ಬ್ರಿಟಿಷರ ಕೈಗೆ ಬಿದ್ದೀತು !
ತಮ್ಮ, ನನ್ನ ಪಾಲಿಗೆ ಉಳಿದ ಕೆಲಸ ಒಂದೇ
ವೇಲು ತಂಬಿ ಮಹಾರಾಜನ ನಿವಾಸವಾದ
ಕಿಲಿಮನೂರ್ರಿಗೆ.ಧಾವಿಸಿದ
ಮಹಾಸ್ವಾಮಿಗಳನ್ನು ಈ ಕೂಡಲೇ ಭೇಟಿಯಾಗಬೇಕು



ತಂಬಿ, ಏನು ಸಮಾಚಾರ?
ಮಹಾಸ್ವಾಮಿ, ಕೆಟ್ಟ ಸುದ್ದಿ'
ಬ್ರಿಟಿಷರು ತಿರುವನಂತಪುರ ಸಮೀಪಿಸಿದ್ದಾರೆ ನಮಗೆ ಸೋಲೇ ಗತಿ'
ಓ! ಕತೆ ಮುಗಿಯಿತೇ?
ಇಲ್ಲ, ಮುಗಿದರೆ ವೇಲು ತಂಬಿಯ ಕತೆ ಮುಗಿದೀತು' ನಿಮಗೂ ತಿರುವಾಂಕೂರಿಗೂ ಯಾವ ಹಾನಿಯೂ ಬರಲಾರದು
ನಿನ್ನ ಮಾತಿನ ಅರ್ಥವೇನು?
ಮಹಾಸ್ವಾಮಿಯವರು ಈ ಪತ್ರ ಓದಿದರೆ ಗೊತ್ತಾಗುತ್ತದೆ


ಈ ಪತ್ರದಲ್ಲಿ, ಈ ದಂಗೆಗೆ ನಾನೊಬ್ಬನೇ ಹೊಣೆಯೇ ಹೊರತು ಇದರಲ್ಲಿ ಮಹಾರಾಜರ ಪಾಲಾಗಲಿ ಜನಗಳ ಪಾಲಾಗಲಿ ಇಲ್ಲ ಎಂದು ತಿಳಿಸಿದ್ದೇನೆ ಬೇರೆಯವರಿಗೆ ಏನೂ ತಿಳಿಯದು ಎಂದು ಬರೆದಿದ್ದೇನೆ.
ನನ್ನ ಮಹಾರಾಜನನ್ನೂ ದೇಶವನ್ನೂ ಬ್ರಿಟಿಷರ ಕೋಪದಿಂದ ಉಳಿಸಲು ಇರುವ ದಾರಿ ಇದೊಂದೇ
ಈ ಖಡ್ಗ ನನ್ನ ಅಮೂಲ್ಯ ಸಂಪತ್ತು ಅದನ್ನು ಮಹಾಸ್ವಾಮಿಗಳಿಗೆ ಒಪ್ಪಿಸು-ತ್ತಿದ್ದೇನಲ್ಲದೆ, ಸಾಯುವ ತನಕವೂ ನಾನು ನಿಮಗೆ ನಿಷ್ಠನಾಗಿರುತ್ತೇನೆ
ವೇಲು ತಂಬಿ!
ಮಹಾ ಸ್ವಾಮಿ!


ವೇಲು ತಂಬಿ ಕೊನೆಯ ಬಾರಿಗೆ ಮಹಾರಾಜನಿಂದ ಬೀಳ್ಕೊಂಡ.
ಮುಂದೆ ಅವನ ಗತಿ ಏನಾದೀತು ?
ಮಹಾಸ್ವಾಮಿ, ಬ್ರಿಟಿಷರು ರಾಜಧಾನಿಯನ್ನು ವಶಪಡಿಸಿಕೊಂಡರು!
ಇನ್ನು ಯುದ್ಧ ಮುಂದುವರಿಸಿ ಪ್ರಯೋಜನವಿಲ್ಲ. ಸಂಧಾನಕ್ಕೆ ನನ್ನ ಒಪ್ಪಿಗೆ ಇದೆ ಎಂದು ತಿಳಿಸು.
ಹೀಗೆ ಯುದ್ಧ ಮುಗಿಯಿತು.
ಎಂಥ ದಿಟ್ಟ ಹೋರಾಟಕ್ಕೆ ಎಂಥ ಫಲ ?
ನಮ್ಮ ದಿವಾನರ ಗತಿ ಏನಾಗುತ್ತದೆಯೋ ಏನೋ !


ವೇಲು ತಂಬಿಯ ಉದಾರ ವರ್ತನೆಯಿಂದ ಮಹಾರಾಜನಿಗೆ ಯಾವ ಹಾನಿಯೂ ತಟ್ಟಲಿಲ್ಲ ಆದರೆ ಆತ ಬ್ರಿಟಿಷರ ಕೈಗೊಂಬೆಯಾಗಬೇಕಾಯಿತು.
ಬ್ರಿಟಿಷರು ತಮ್ಮ ಸೇಡನ್ನು ಸಾಧಿಸಲು ಹಟ ತೊಟ್ಟರು
ದ್ರೋಹಿಯಾದ ವೇಲು ತಂಬಿಯನ್ನು ನೀವು ಬಂಧಿಸಿ ಕೊಲ್ಲಿಸಬೇಕು ಇದು ರೆಸಿಡೆಂಟರ ಅಪ್ಪಣೆ
ಸ್ವಾಮಿನಿಷ್ಠನಾದ ನನ್ನ ದಿವಾನನನ್ನು ಬಂಧಿಸಿ ಕೊಲ್ಲಿಸುವುದಾದರೂ ಹೇಗೆ ?
ಹಾಗೆ ಮಾಡದೆ ಮಹಾರಾಜ-ನಿಗೆ ವಿಧಿಯಿರಲಿಲ್ಲ
ವೇಲು ತಂಬಿ ಎಲ್ಲಿದ್ದರೂ ಹುಡುಕಿ ತನ್ನಿ
ಆಗಲಿ ಮಹಾಸ್ವಾಮಿ
ಎಲ್ಲರೂ ವೇಲು ತಂಬಿಯನ್ನು ಹುಡುಕತೊಡಗಿದರು



ಧೀರ ವೇಲು ತಂಬಿ ತನ್ನ ಸೋದರನೊಡನೆ ಪರಾರಿಯಾಗಿ ಎಲ್ಲೋ ಅಡಗಿಕೊಂಡ
ಬಾ ತಮ್ಮ, ಬಾ ಬೇಗ. ನಮಗೆ ಇನ್ನು ಹೆಚ್ಚು ಸಮಯವಿಲ್ಲ
ಅವರು ಮೂನಡಿಯಲ್ಲಿದ್ದ ಒಂದು ಹಾಳು ದೇಗುಲ-ವನ್ನು ಸೇರಿದರು
ಇಲ್ಲಿದ್ದರೆ ನಮಗೆ ಅಪಾಯ ಬರದು
ಅವರಿಗೆ ದೇವಾಲಯವನ್ನು ಶೋಧಿಸುವ ಯೋಚನೆ ಬರದು
ದೇಗುಲದ ಕಾಳಿಕಾ ವಿಗ್ರಹವನ್ನು ಸಮೀಪಿಸಿ-
ಪದ್ಮನಾಭನ್, ನಮ್ಮ ಪಾಲಿಗೆ ಒಂದಿಷ್ಟು ಸಮಯ ಸಿಕ್ಕಿದ್ದೇ ಲಾಭ
ತಾಯಿ, ನಮ್ಮನ್ನು ರಕ್ಷಿಸು!


ಹಿಂದೊಮ್ಮೆ ನಾನು ಬ್ರಿಟಿಷರ ದಬ್ಬಾಳಿಕೆಯನ್ನು ತೊಡೆದುಹಾಕಬಹು-ದೆಂಬ ಕನಸನ್ನು ಕಂಡಿದ್ದೆ
ಆದರೆ ಇಂದು ಆ ಕನಸು ಒಡೆಯಿತು ಬೇರೆಯವರು ಅಂಥ ಹೋರಾಟ ಮುಂದುವರಿಸಬಹುದು
ಅಂತೂ ಒಂದಲ್ಲ ಒಂದು ದಿನ ಬ್ರಿಟಿಷರನ್ನು ಅಟ್ಟುವುದು ನಿಜ
ಅಷ್ಟರಲ್ಲಿ ಬ್ರಿಟಿಷರಿಗೆ ವೇಲು ತಂಬಿ ಅಡಗಿದ್ದ ತಾವಿನ ಸುಳಿವು ಸಿಕ್ಕಿತು ಅವರು ತಮ್ಮ ಬಲೆ ಬೀಸಿದರು




ಕೇಳು ಪದ್ಮನಾಭನ್, ಅದೇನು ಸದ್ದು ತಿಳಿಯಿತೇ ?
ಸೈನಿಕರ ಕಾಲು ಸಪ್ಪಳ'
ಬ್ರಿಟಿಷರು ನಮ್ಮನ್ನು ಕಂಡು ಹಿಡಿದರು !
ಮುಗಿ- ಯಿತು ಇನ್ನು'
ಆ ಬ್ರಿಟಿಷರು ನನ್ನನ್ನೆಂದೂ ಸೆರೆಹಿಡಿಯ- ಲಾರರು '
ಇಕೋ ತಮ್ಮ ಈ ಖಡ್ಗವನ್ನು


ನಿನಗೆ ನನ್ನ ಮೇಲ್ ಪ್ರೀತಿ ಇದ್ದರೆ ನನ್ನನ್ನು ಕೊಂದು ನನಗೆ ಬಿಡುಗಡೆ ಕೊಡಿಸು!
ದಮ್ಮಯ್ಯ ಅಣ್ಣಾ! ಅದಕ್ಕೆ ನನ್ನ ಕೈ ಬರದು!
ಹೇಡಿ ನೀನು!!
ತಾಯಿ, ನಿನ್ನ ಆಶೀರ್ವಾದ ನನಗಿರಲಿ!
ಅಯ್ಯೋ! ಬೇಡ! ಅಣ್ಣಾ!!


ಬ್ರಿಟಿಷರು ಬೇಗನೆ ದೇವಾಲಯವನ್ನು ಸುತ್ತುವರಿದರು
ಕೊನೆಗೂ ವೇಲು ತಂಬಿ ನಮ್ಮ ಕೈಗೆ ಸಿಕ್ಕಿ ಬಿದ್ದ'


ಸೈನಿಕರು ಬಂದದ್ದು ತಡವಾಯಿತು ವೇಲು ತಂಬಿ ಅವರಿಗೆ ಸಿಗಲಿಲ್ಲ
ನೀವು ಬಂದದ್ದು ತಡವಾಯಿತು ನೋಡಿ, ಅಲ್ಲಿದ್ದಾನೆ ವೇಲು ತಂಬಿ ಇನ್ನು ಆತ ನಿಮ್ಮ ಕೈಗೆ ಸಿಗಲಾರ'
ಅವನು ಸತ್ತನೇ ? ಚಿಂತೆಯಿಲ್ಲ ಅವನ ಹೆಣವನ್ನು ತೂಗು ಹಾಕುತ್ತೇವೆ ನಿನ್ನನ್ನೂ ನೇಣು ಹಾಕಿಸುತ್ತೇವೆ'
ಸ್ವಾತಂತ್ರ್ಯ ಯೋಧರಲ್ಲಿ ಮೊದಲಿಗನೆನಿಸಿದ ವೇಲು-ತಂಬಿಯ ನೆನಪು ಇನ್ನೂ ಜೀವಂತವಾಗಿದೆ


BABLU JOINS THE CIRCUS
AT THE CIRCUS...
LOOK THERE'S BABLU
WOW! HE'S SO FUNNY
BABLU DOES LOTS OF FUNNY THINGS AND MAKES PEOPLE LAUGH
HA HA HEE HEE
SEE! HE'S EVEN IMITATING THE MONKEYS
AND LOOK AT HIM RIDING THAT CYCLE!
BUT BABLU IS NOT LOOKING WHERE HE'S GOING AND...
CRASH
MY NOSE I LOST MY NOSE QUICK
NP 007 BUBBLE GUM
BABLU BLOWS A BUBBLE WITH HIS NP 007 BUBBLE GUM AND STICKS IT ON HIS NOSE
HURRAH
THANKS TO NP 007
COME ON KIDS GET YOUR SHARE OF NP 007 BUBBLE GUM AND HAVE SOME FUN WITH BIG BUBB-BUBBLES
NP 007 BUBBLE GUM
ALL THE FUN IN YOUR LIFE
THE NATIONAL PRODUCTS, BANGALORE

Starry Strawberry  met
Merrymaking Mango  met
Aristoapricot  met
Bunchovgrapes  met
Porcupineapple  met
Apple-of-his-eye  and
they all lived happily
ever after in Kissan
jams.




***The Kissan Range***


Mixed fruit pineapple strawberry raspberry mango apple apricot Goldenmist orange marmalade and guava jelly


Kissan

maa KPL 10-78

# ವಿಜ್ಞಾನ: ನೋಡು ಕಲಿ






ಮಾಲೆಯಲ್ಲಿ ಹೆಸರೇ ಸೂಚಿಸುವಂತೆ
ವರ್ಣರಂಜಿತ ಚಿತ್ರಗಳನ್ನು ನೋಡಿ
ಸರಳ ನಿರೂಪಣೆಯಿಂದ ಕಲಿಯುವುದು.


ಈ ಮಾಲೆಯ ಪ್ರಕಟನೆಗಳು :

| | |
|---|---|
| ಆಕಾಶದ ಅದ್ಭುತಗಳು | ಕಾಲ |
| ಮನುಷ್ಯನ ಕತೆ | ಆಹಾರ ಮತ್ತು ಪೋಷಣೆ |
| ಹಕ್ಕಿಗಳು | ಲೋಹಗಳು |
| ಶಿಲೆಗಳು ಖನಿಜಗಳು | ಜೀವವಿಕಾಸ |
| ಕೀಟಗಳು | ನಮ್ಮ ಭೂಮಿ |
| ಮನುಷ್ಯದೇಹ | ಹೂವುಗಳು |
| ಸಂಚಾರ ಸಾಧನಗಳು | ಮರಗಳು |
| ಸಾಕುಪ್ರಾಣಿಗಳು | ಪ್ರಾಗೈತಿಹಾಸಿಕ ಪ್ರಾಣಿಗಳು |

ಬೆಲೆ ರೂ 5

**ಐಬಿಎಚ್ ಪ್ರಕಾಶನ**
ಗಾಂಧಿನಗರ, ಬೆಂಗಳೂರು 560 009




Right pardner Dipy's squashes and syrups are a real knock-out! And just yuh try Dipy's ketchups, jams and jellies, you'll find Dipy's is the fastest draw on the table!

Dipy's Lemon, Orange, Mango Squashes, Lemon Barley Water, Lime Cordial, Pineapple Crush, delicious Rose Syrup, Frolic Fruit Flavoured Syrup and a mouth waterin' variety of other syrups!!

# Dipy's is real fruity —so fresh 'n' juicy.

daCunha-Dip-44